# ಗೃಹಸ್ಥ ಜೀವನ ಮತ್ತು ಸೇವಾಧರ್ಮ

**ವಿರಾಜ ಮಂಗಲಗಿ**

ಜನಸಾಮಾನ್ಯರಲ್ಲಿ ಸೇವಾಭಾವ ಜಾಗೃತವಾದರೆ ಅದರಿಂದ ನಾಡಿಗೆ ಒಳಿತಾಗುವುದು; ಸ್ವತಃ ಅವರಿಗೂ ಆಧ್ಯಾತ್ಮಿಕ ಉನ್ನತಿಯುಂಟಾಗುವುದು. ಗೃಹಸ್ಥರು ಸೇವಾಭಾವವನ್ನು ರೂಢಿಸಿಕೊಂಡರೆ, ಆ ಮನೆಯಲ್ಲಿ ಹುಟ್ಟುವ ಮಕ್ಕಳು ಸೇವಾಪರರಾಗಿರುತ್ತಾರೆ. ಅದು ಆಧ್ಯಾತ್ಮಿಕ ಭಾವದಿಂದ ಕೂಡಿದ ಸೇವೆಯಾಗಿದ್ದರೆ, ಅದರಿಂದ 'ತನ್ನ ಮೋಕ್ಷ ಹಾಗೂ ಜಗತ್ತಿನ ಹಿತ' ಎರಡೂ ಸಾಧಿತವಾಗುತ್ತದೆ. ಈ ವಿಚಾರಗಳನ್ನು ಕುರಿತು ಚಿಂತನೆ ನಡೆಸಿರುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವಾರು ಬಗೆಯ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಸ್ವಾ**ಮಿ ವಿವೇಕಾನಂದರು ಭಾರತೀಯರಿಗೆ ಘಂಟಾಘೋಷವಾಗಿ ಸಾರಿ ಹೇಳುತ್ತಾರೆ; ''ಧರ್ಮವು ಭಾರತದ ಜೀವಾಳ. ಭಾರತ ಎಂದು ಧರ್ಮವನ್ನು ತ್ಯಜಿಸುವುದೋ ಅಂದೇ ಅದು ನಾಶವಾಗುವುದು''.

ಭಾರತದ ಮೂಲ ಆಧಾರವೇ ಹಿಂದೂಧರ್ಮ, ಸನಾತನ ಧರ್ಮ. 'ಧರ್ಮ' ಎಂಬ ಪದವನ್ನು ನಾವು ವಿಶಾಲವಾದ ದೃಷ್ಟಿಕೋನದಿಂದ ನೋಡುವುದಾದರೆ ಅದು ನೈತಿಕತೆ, ಮಾನವೀಯತೆ ಹಾಗೂ ಆಧ್ಯಾತ್ಮಿಕತೆಯನ್ನು ಒಳಗೊಂಡಿರುವ ಒಂದು ಸರ್ವಶ್ರೇಷ್ಠವಾದ ಜೀವನ ಕ್ರಮ. ನಮ್ಮ ಸನಾತನ ಋಷಿ-ಮುನಿಗಳು ಪ್ರತಿಯೊಬ್ಬ ಮಾನವನ ಎದುರಿಗೆ ನಾಲ್ಕು ಪುರುಷಾರ್ಥಗಳು — ಅವುಗಳನ್ನು ಅನುಷ್ಠಾನಗೊಳಿಸಿ ಜೀವನದ ಸಾರ್ಥಕತೆಯನ್ನು ಪಡೆಯುವ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಅದೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಧರ್ಮಸಮ್ಮತವಾದ ಜೀವನವನ್ನು ನಡೆಸುತ್ತ, ಸತ್ಯಮಾರ್ಗದಲ್ಲಿ ಹಣವನ್ನು ಸಂಪಾದಿಸಿ, ಮತ್ತೊಬ್ಬರ ಸ್ವಾತಂತ್ರ್ಯಕ್ಕೆ ಧಕ್ಕೆಬಾರದಂತೆ ತಮ್ಮ ಆಶೆ-ಆಕಾಂಕ್ಷೆಗಳನ್ನು ಈಡೇರಿಸಿಕೊಂಡು, ಮನುಷ್ಯ ಜೀವನದ ಪರಮಗುರಿಯಾದ ಮೋಕ್ಷವನ್ನು ಪಡೆಯುವುದು.

ಭಗವಾನ್ ಶ್ರೀರಾಮಕೃಷ್ಣರು ಹೇಳುತ್ತಾರೆ: ''ಮನುಷ್ಯ ಜೀವನದ ಗುರಿ ಭಗವತ್ಸಾಕ್ಷಾತ್ಕಾರ'' ಎಂದು. ಭಗವಂತನನ್ನು ಪಡೆಯುವುದು ನಮ್ಮ ಜೀವನದ ಮೊದಲ ಆದ್ಯತೆಯೆಂದಾಗ ನಮ್ಮ ಪ್ರತಿಯೊಂದು ನಡೆ-ನುಡಿಯೂ, ಆಚಾರ-ವಿಚಾರವೂ, ನಾವು ಮಾಡುವ ಪ್ರತಿಯೊಂದೂ ಕೆಲಸ ಕಾರ್ಯಗಳು-ಭಗವದರ್ಪಿತವಾಗಬೇಕು. ಆಗ ನಾವು ಹಂತ ಹಂತವಾಗಿ ಆಧ್ಯಾತ್ಮಿಕ ಪಥದಲ್ಲಿ ಮುಂದುವರೆಯುವಂತಾಗುತ್ತದೆ. ಇದನ್ನು ನಾವು ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗದ ಮೂಲಕ ಸಾಧಿಸಬಹುದು. ಈ ನಾಲ್ಕು ಯೋಗಗಳ ಸಮನ್ವಯದ ಮೂಲಕವೂ ಅಥವಾ ಸ್ವಾಮೀಜಿ ತೋರಿಸಿಕೊಟ್ಟ ಸರಳ ಸುಲಭವಾದ 'ಸೇವಾತತ್ತ್ವ'ದ ಮೂಲಕವೂ ನಾವು ಗುರಿಯನ್ನು ತಲುಪಬಹುದು.



ನಮ್ಮ ಪೂರ್ವಜರು ಮಾನವನ ಜೀವನವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದರು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸಂನ್ಯಾಸ. ಎಲ್ಲವನ್ನೂ ಆಶ್ರಮವೆಂದು ಹೆಸರಿಸಿದರು. ಆಶ್ರಮವೆಂದ ಮೇಲೆ ಶಾಂತಿ, ಸಾಮರಸ್ಯ, ಸೌಹಾರ್ದತೆ ಪರಸ್ಪರ ಪ್ರೀತಿ-ವಿಶ್ವಾಸ ಹಾಗೂ ನಿಸ್ವಾರ್ಥವಾದ ಸೇವಾಮನೋಭಾವನೆ ನೆಲೆಸಿರಲೇಬೇಕು. ಪ್ರತಿಯೊಂದು ಆಶ್ರಮಗಳೂ ತಮ್ಮದೇ ಆದ ಜವಾಬ್ದಾರಿಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿವೆ. ಇಲ್ಲಿ ಗೃಹಸ್ಥನ ಪಾತ್ರ ಅತ್ಯಂತ ಪ್ರಮುಖವಾದದ್ದು. ಏಕೆಂದರೆ ಗೃಹಸ್ಥನು ಸಮಾಜದ ಬೆನ್ನೆಲುಬು. ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸಂನ್ಯಾಸಾಶ್ರಮಗಳಿಗೆ ಗೃಹಸ್ಥನೇ ಆಧಾರಸ್ತಂಭವಿದ್ದಂತೆ. ಯಾವಾಗ ಗೃಹಸ್ಥನು ಉನ್ನತವಾದ, ಉದಾತ್ತವಾದ ಆದರ್ಶಗಳನ್ನು ತಮ್ಮ ಜೀವನದಲ್ಲಿ ಪಾಲಿಸುವನೋ ಆಗ ಸನಾತನ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ.

ಗೃಹಸ್ಥನೆಂದರೆ ಗೃಹದಲ್ಲಿ ವಾಸಿಸುವ ಪತಿ ಅಥವಾ ಪತ್ನಿ ಎಂದರ್ಥ. ಅಂದರೆ ಪತಿಯಾಗಲಿ ಅಥವಾ ಪತ್ನಿಯಾಗಲಿ ಕೇವಲ ತಮ್ಮ ಮಕ್ಕಳ, ಕುಟುಂಬ ಸದಸ್ಯರ ಯೋಗಕ್ಷೇಮವನ್ನಷ್ಟೇ

ನೋಡಿಕೊಂಡು ಮನೆಯೊಳಗಿದ್ದರೆ ಅವರು ಆದರ್ಶ ಗೃಹಸ್ಥರಾಲು ಸಾಧ್ಯವಿಲ್ಲ. ಬದಲಾಗಿ ಗೃಹಸ್ಥನು ಇಡೀ ಸಮಾಜವೇ ತನ್ನ ಕುಟುಂಬ ಎಂದು ಭಾವಿಸಿ, ತನ್ನ ಕೈಲಾದಷ್ಟು ಸೇವೆಯನ್ನು ಇತರರಿಗೆ ಸಲ್ಲಿಸಿದಾಗ, ಸಮಾಜದಲ್ಲಿ ಖಂಡಿತವಾಗಿಯು ಸಕಾರಾತ್ಮಕವಾದ ಪರಿವರ್ತನೆಯಾಗುತ್ತದೆ.

ಸ್ವಾಮಿ ವಿವೇಕಾನಂದರು ಅತ್ಯಂತ ಪ್ರಾಯೋಗಿಕವಾಗಿ ಧರ್ಮವನ್ನು ವ್ಯಾಖ್ಯಾನಿಸುತ್ತಾರೆ; ''ಧರ್ಮದ ತಿರುಳಿರುವುದು ಸಿದ್ಧಾಂತಗಳಲ್ಲಲ್ಲ, ಆಚರಣೆಯಲ್ಲಿ. ನಾವು ಒಳ್ಳೆಯರಾಗುವುದು ಮತ್ತು ಇತರರಿಗೆ ಒಳ್ಳೆಯದನ್ನು ಮಾಡುವುದು — ಇದೇ ಧರ್ಮದ ಸರ್ವಸ್ವ.'' ಮೊದಲು ನಾವು ಶ್ರೇಷ್ಠವಾದ ಮೌಲ್ಯಗಳನ್ನು ಮೈಗೂಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುತ್ತ, ಇತರರು ತನ್ನಂತೆ ಎಂಬ ಭಾವನೆಯಿಂದ ನಿಸ್ವಾರ್ಥವಾದ ಸೇವೆಯನ್ನು ಸಲ್ಲಿಸುವುದರಲ್ಲಿಯೇ ಧರ್ಮದ ಸಾರವಡಗಿದೆ. ಇದರಿಂದ ಸ್ವಹಿತ, ಪರಹಿತ, ಸಮಾಜಹಿತ, ರಾಷ್ಟ್ರಹಿತದ ಜೊತೆಜೊತೆಗೆ ಜಗದ್ಧಿತವನ್ನು ಸಾಧಿಸಿದಂತಾಗುತ್ತದೆ. ಆದ್ದರಿಂದ ಗೃಹಸ್ಥ ಜೀವನದಲ್ಲಿ ಸೇವಾಧರ್ಮವು ಅತ್ಯಂತ ಪ್ರಮುಖವಾದ ಪಾತ್ರವಹಿಸುತ್ತದೆ.

ನಮ್ಮೊಳಗಿರುವ ಅನಂತವಾದ ಆಧ್ಯಾತ್ಮಿಕ ಶಕ್ತಿಯು ಪರಸ್ಪರ ಪ್ರೀತಿ, ಅನುಕಂಪೆ ಹಾಗೂ ಸೇವಾಪರತೆ ಮೊದಲಾದ ಮಾನವೀಯ ಮೌಲ್ಯಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ವ್ಯಕ್ತವಾಗುತ್ತದೆ. ಒಬ್ಬ ವ್ಯಕ್ತಿಯು ಇತರರ ಸ್ಥಾನದಲ್ಲಿ ತನ್ನನ್ನು ಇರಿಸಿ, ಅವರ ಕಷ್ಟಗಳಿಗೆ ಸ್ಪಂದಿಸುತ್ತ ಅವರ ಸುಖದುಃಖಗಳನ್ನು ಅರಿಯುವಂತಾದರೆ, ಅದು ನಾವು ಮಾಡುವ ಸೇವೆಯ ಮೊದಲನೆಯ ಹಂತ. ಅಂತರಂಗದಲ್ಲಿರುವ ದಿವ್ಯತೆಯನ್ನು ಅರಿತು, ಪ್ರತಿಯೊಬ್ಬರಲ್ಲಿ ಅದನ್ನು ಕಾಣುವ ಪ್ರಯತ್ನ ಹಾಗೂ ಕಂಡು ಮಾಡುವಂತಹ ಮಾನವನ ಸೇವೆಯೇ ಭಗವಂತನ ಪೂಜೆಯಾಗುತ್ತದೆ. ನಾವು ಮಾಡುವ ಸೇವೆಯು ಆಧ್ಯಾತ್ಮಿಕ ಸಾಧನೆಯಾಗಿ ಪರಿವರ್ತನೆಯಾಗಬೇಕಾದರೆ ಅಲ್ಲಿ ತ್ಯಾಗದ ಹಿನ್ನಲೆಯಿರಲೇಬೇಕು. ತ್ಯಾಗವಿಲ್ಲದ ಸೇವೆ ಮರಳಿನ ಮೇಲೆ ಕಟ್ಟಿದ ಕಟ್ಟಡದಂತಾಗುತ್ತದೆ. 'ತ್ಯಾಗ ಮತ್ತು ಸೇವೆ'ಯ ಕರೆಯನ್ನು ಸ್ವಾಮೀಜಿ ನಮಗೆ ನೀಡಿದ್ದಾರೆ.

ನಮ್ಮ ಸಮಾಜದಲ್ಲಿ ಶೇಕಡಾ ೯೯.೯ ಜನ ಗೃಹಸ್ಥರಿದ್ದಾರೆ. ಆದ್ದರಿಂದ ಗೃಹಸ್ಥನ ಜೀವನ-ಕರ್ತವ್ಯಗಳು ಅತ್ಯಂತ ಮಹತ್ವಪೂರ್ಣವಾದವುಗಳು. ತನ್ನ ಸಂಸಾರದ ಜೊತೆ ಇತರ ಆಶ್ರಮಗಳನ್ನು ಪೋಷಿಸುವವನು ಗೃಹಸ್ಥನೇ. ಸ್ವಾಮಿ ವಿವೇಕಾನಂದರು 'ಕರ್ಮಯೋಗ' ಗ್ರಂಥದಲ್ಲಿ ಗೃಹಸ್ಥನ ಕರ್ತವ್ಯಗಳನ್ನು ಮಾರ್ಮಿಕವಾಗಿ ಮನಮುಟ್ಟುವಂತೆ ವಿಶ್ಲೇಷಿಸಿದ್ದಾರೆ. ಅವುಗಳ ಚಿಂತನ-ಮಂಥನ ಮೂಲಕ ಗೃಹಸ್ಥನು ತನ್ನ ಆಧ್ಯಾತ್ಮಿಕ ಬೆಳವಣಿಗೆಯ ಜೊತೆಗೆ ರಾಷ್ಟ್ರನಿರ್ಮಾಣ ಕಾರ್ಯದಲ್ಲಿಯೂ ಮಹತ್ತರವಾದ ಪಾತ್ರವಹಿಸಿದಂತಾಗುತ್ತದೆ.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತವನ್ನು ಪರ್ಯಟನೆ ಮಾಡುತ್ತಾ ರಾಜಸ್ಥಾನದ ಆಳ್ವಾರಿನಲ್ಲಿ ಉಳಿದುಕೊಂಡಾಗ, ಒಬ್ಬ ಬ್ರಾಹ್ಮಣ ಹುಡುಗ ಆಗಾಗ ಅವರ ಬಳಿ ಬರುತ್ತಿದ್ದ. ಆ ಬಾಲಕ ಸ್ವಾಮೀಜಿಯನ್ನು ತನ್ನ ಸ್ವಂತ ಗುರುವೆಂದೇ ಭಾವಿಸಿ ಭಕ್ತಿ-ವಿಶ್ವಾಸವನ್ನು ತಾಳಿದ್ದ. ಅವನಿಗೆ ಉಪನಯನದ ವಯಸ್ಸಾಗಿತ್ತು. ಆದರೆ ಬಡತನದ ಕಾರಣದಿಂದಾಗಿ ಅದು ಸಾಧ್ಯವಾಗಲಿಲ್ಲ. ಇದನ್ನು ಗಮನಿಸಿದ ಸ್ವಾಮೀಜಿ ತಕ್ಷಣ ಅಲ್ಲಿನ ಕೆಲವು ಶ್ರೀಮಂತ ಭಕ್ತರ ಮುಂದೆ ಹೇಳಿದರು; ''ನಿಮ್ಮಲ್ಲಿ ನನ್ನ ಒಂದು ಕೋರಿಕೆಯಿದೆ. ಈ ಬ್ರಾಹ್ಮಣ ಬಾಲಕ ತನ್ನ ಉಪನಯನದ ಖರ್ಚನ್ನು ಹೊಂದಿಸಿಕೊಳ್ಳಲಾರದವನಾಗಿದ್ದಾನೆ. ಅವನಿಗೆ ಸಹಾಯ ಮಾಡಬೇಕಾದದ್ದು ಗೃಹಸ್ಥರಾದ ನಿಮ್ಮೆಲ್ಲರ ಕರ್ತವ್ಯ. ನೀವೆಲ್ಲರೂ ಅವನ ಪರವಾಗಿ ಸ್ವಲ್ಪ ವಂತಿಗೆಯನ್ನು ಎತ್ತಬೇಕು. ಈ ವಯಸ್ಸಿನ ಬ್ರಾಹ್ಮಣ ಬಾಲಕನೊಬ್ಬನಿಗೆ ತಾನು ಆಚರಿಸಬೇಕಾದ ಧಾರ್ಮಿಕ ವಿಧಿಗಳ ಬಗ್ಗೆ ತಿಳಿಯದೇ ಇರುವುದು ಸರಿಯಲ್ಲ. ಅಲ್ಲದೆ ಅವನ ವಿದ್ಯಾಭ್ಯಾಸಕ್ಕೂ ಒಂದು ವ್ಯವಸ್ಥೆ ಮಾಡಲು ಸಾಧ್ಯವಾದರೆ ಬಹಳ ಒಳ್ಳೆಯದು.''

ಕೆಲವು ದಿನಗಳ ನಂತರ ಅವರು ಮೌಂಟ್ ಅಬುವಿಗೆ ಹೋದರೂ ಆಳ್ವಾರಿನ ಶಿಷ್ಯನಾದ ಗೋವಿಂದ ಸಹಾಯ್ ಎಂಬುವವನಿಗೆ ಪತ್ರದ ಮೂಲಕ, ''...ನೀವು ಆ ಬ್ರಾಹ್ಮಣ ಬಾಲಕನ ಉಪನಯನವನ್ನು ನೆರವೇರಿಸಿದ್ದೀರಿ ತಾನೆ?'' ಎಂದು ಕೇಳುತ್ತಾರೆ. ಸ್ವಾಮೀಜಿ ಸಮಾಜದಲ್ಲಿ ಗೃಹಸ್ಥನ ಜವಾಬ್ದಾರಿಯನ್ನು ತೋರಿಸಿಕೊಟ್ಟು, ಧರ್ಮಪ್ರಜ್ಞೆಯನ್ನು ಉರ್ಜಿತಗೊಳಿಸುವಲ್ಲಿ ಗೃಹಸ್ಥನು ಹೇಗೆ ಮೇಲ್ಪಂಕ್ತಿಯಾಗಬಲ್ಲನು ಎಂಬುದನ್ನು ವಿವರಿಸಿದ್ದಾರೆ.

ಸ್ವಾಮಿ ವಿವೇಕಾನಂದರು 'ಕರ್ಮಯೋಗ'ದಲ್ಲಿ ಹೇಳುವ ಪ್ರಕಾರ ನಾವು ಇನ್ನೊಬ್ಬರಿಗೆ ಸೇವೆಯನ್ನು ಸಲ್ಲಿಸುವುದರ ಮೂಲಕ ನಿಜವಾಗಿಯೂ ನಮ್ಮ ಆತ್ಮೋದ್ಧಾರವಾಗುತ್ತದೆ. ಗೃಹಸ್ಥನಾದವನು ಇದನ್ನು ಇನ್ನೂ ಸರಿಯಾಗಿ ಮಾಡಬಹುದು.

ಗೃಹಸ್ಥನು ಭಗವದಭಿಮುಖವಾದ ಜೀವನವನ್ನು ನಡೆಸುತ್ತ ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಒಳ್ಳೆಯ ಸಂಸ್ಕಾರಗಳನ್ನು ಕಲಿಸುವುದರಿಂದ ಸಮಾಜಕ್ಕೆ ಒಬ್ಬ ಯೋಗ್ಯ ವ್ಯಕ್ತಿಯನ್ನು ನೀಡಿದಂತಾಗುತ್ತದೆ. ಎಲ್ಲ ಸಂತ ಮಹಾತ್ಮರು, ಯತಿವರೇಣ್ಯರು ಜನ್ಮತಾಳಿದ್ದು ಸದ್ಗೃಹಸ್ಥರ ಮನೆಯಿಂದಲೇ.

ಇಂದಿನ ದಿನಗಳಲ್ಲಿ 'ಸೇವೆ' ಎಂಬ ಪದವು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಅನೇಕ ಕಡೆಗಳಲ್ಲಿ ಸೇವೆಯು ಪರಹಿತ ಕಾರ್ಯವಾಗದೆ, ಸ್ವಾರ್ಥ, ಹೆಸರು-ಕೀರ್ತಿಗಳಿಗೆ ದುರ್ಬಳಕೆಯಾಗುತ್ತಿದೆ. ನಾವು ದೇವಸ್ಥಾನಗಳಲ್ಲೋ ಅಥವಾ ಇತರ ಸಂಘ ಸಂಸ್ಥೆಗಳಲ್ಲೋ ಬಹಳ ಶ್ರಮವಹಿಸಿ ಸೇವೆಯನ್ನು ಸಲ್ಲಿಸುತ್ತೇವೆ. ಆದರೆ ನಮ್ಮ ಮನೆಯಲ್ಲಿರುವ ವಯಸ್ಸಾದ ತಂದೆ-ತಾಯಿಯರನ್ನು ವೃದ್ಧಾಶ್ರಮಗಳಿಗೆ ಕಳುಹಿಸುತ್ತಿದ್ದೇವೆ. ಇದು ಖಂಡಿತ

ಸಲ್ಲದು. 'Charity begins at home'. ಸೇವೆ ಶಾನಿದ್ದಲ್ಲಿಂದಲೇ ಪ್ರಾರಂಭವಾಗಬೇಕು ಎಂಬ ಮಾತಿನಂತೆ, ಮೊದಲು ನಮ್ಮ ತಂದೆತಾಯಿಯರನ್ನು ಪ್ರೀತಿ, ವಾತ್ಸಲ್ಯದಿಂದ ನೋಡಿಕೊಂಡು, ಸಂಸ್ಕಾರಯುತ ಮಕ್ಕಳನ್ನು ನಿರ್ಮಿಸುವುದರ ಕಡೆಗೆ ಗಮನಕೊಟ್ಟರೆ, ನಮ್ಮ ಪರಂಪರೆಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಿದಂತಾಗುತ್ತದೆ. ಇದು ಎಲ್ಲಕ್ಕಿಂತ ಉತ್ಕೃಷ್ಟವಾದ ಸೇವೆಯಾಗುತ್ತದೆ.

ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಸ್ವಾಮಿ ಶಿವಾನಂದರು (ಮಹಾಪುರುಷ್ ಮಹಾರಾಜ್); ಅವರ ಪೂರ್ವಾಶ್ರಮದ ಹೆಸರು ತಾರಕನಾಥ ಘೋಷಾಲ. ತಂದೆ ರಾಮಕನ್ಯೆ ಘೋಷಾಲ ಮತ್ತು ತಾಯಿ ವಾಮಸುಂದರಿ ಭಗವದ್ಭಕ್ತರು, ಆದರ್ಶ ಗೃಹಸ್ಥರು. ಅವರು ತಮ್ಮ ಮನೆಯಲ್ಲಿ ೩೦ ವಿದ್ಯಾರ್ಥಿ ಗಳನ್ನು ಇಟ್ಟುಕೊಂಡು ಅವರ ಊಟ-ಬಟ್ಟೆ-ವಿದ್ಯಾಭ್ಯಾಸದ ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದರು. ಹೀಗೆ ಅವರು ಗೃಹಸ್ಥ ಜೀವನದಲ್ಲಿದ್ದುಕೊಂಡು ಸೇವಾಧರ್ಮವನ್ನು ಪರಿಪಾಲಿಸಿಕೊಂಡು ಬಂದರು.

ನಾವು ಇರುವ ಕಡೆಗೆ ಕೆಲವು ಸದ್ವಿಚಾರಗಳನ್ನು ಪ್ರಚಾರಗೊಳಿಸುವ ಮೂಲಕವೂ ಸೇವೆಯನ್ನು ಸಲ್ಲಿಸಬಹುದು. ಬಾಲಕ ನರೇಂದ್ರನನ್ನು ತಾಯಿ ಭುವನೇಶ್ವರಿ ತನ್ನ ಮಡಿಲಲ್ಲಿ ಕೂಡಿಸಿಕೊಂಡು ರಾಮಾಯಣ, ಮಹಾಭಾರತ ಹಾಗೂ ಅನೇಕ ಮಹಾತ್ಮರ ನೀತಿಪರವಾದ ಕಥೆಗಳನ್ನು ಹೇಳುತ್ತಿದ್ದಳು. ಅವನ ಅಜ್ಜಿ ಮುತ್ತಜ್ಜಿಯೂ ಭಾಗವತದ ಕತೆಗಳನ್ನು ಸ್ವಾರಸ್ಯಕರವಾಗಿ ತಿಳಿಸುತ್ತಿದ್ದರು. ಇವೆಲ್ಲವು ಬಾಲಕ ನರೇಂದ್ರನ ಮೇಲೆ ಅಚ್ಚಳಿಯದ ಸತ್ಪರಿಣಾಮವನ್ನುಂಟುಮಾಡಿ, ತಮ್ಮ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವಂತಾಯಿತು. ಈ ಪ್ರಕಾರ ಗೃಹಸ್ಥರು ಶ್ರೇಷ್ಠವಾದ ಚಿಂತನೆಗಳನ್ನು ತಮ್ಮ ಮಕ್ಕಳಿಗೆ ಹಾಗೂ ಸಮಾಜದಲ್ಲಿ ಪ್ರಚಾರಪಡಿಸುವ ಮೂಲಕ ಸೇವೆಯನ್ನು ಸಲ್ಲಿಸಬಹುದು.

ಶ್ರೀರಾಮಕೃಷ್ಣರ ಗೃಹೀಭಕ್ತನಾದ ಸುರೇಂದ್ರನಾಥ ಮಿತ್ರನು ಮಹಾಕಾಳಿಯ ಪರಮಭಕ್ತ. ಕಲ್ಕತ್ತದ 'ದೊಸ್ತ್' ಎಂಬ ದೊಡ್ಡ ಬ್ರಿಟಿಷ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದನು. ಸಾಕಷ್ಟು ಹಣವನ್ನು ಸಂಪಾದಿಸಿದ್ದ. ಒಮ್ಮೆ ಶ್ರೀರಾಮಕೃಷ್ಣರು ಹೇಳುತ್ತಾರೆ: ''ಸುರೇಂದ್ರ, ನೀನು ದೊಡ್ಡ ಕಂಪೆನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೀಯಾ. ನೀನು ಕಚೇರಿಯಲ್ಲಿ ಸುಳ್ಳು ಹೇಳುತ್ತೀಯಾ. ಆದರೂ ನೀನು ಕೊಟ್ಟ ತಿಂಡಿಯನ್ನು ನಾನು ತಿನ್ನುತ್ತೇನೆ. ಏಕೆಂದರೆ ನೀನು ಬಹಳಷ್ಟು ದಾನ ಮಾಡುತ್ತಿರುವೆ. ಸಂಪಾದಿಸುವುದಕ್ಕಿಂತ ಹೆಚ್ಚಾಗಿಯೇ ದಾನ ಮಾಡುತ್ತಿರುವೆ... ಜಿಪುಣರಾದವರಿಂದ ನಾನು ಏನನ್ನೂ ಸ್ವೀಕರಿಸಲಾರೆ...''

ಸತ್ಯನಿಷ್ಠರಾದ ಶ್ರೀರಾಮಕೃಷ್ಣರು ತಮ್ಮ ಭಕ್ತರಲ್ಲಿ ಯಾರಾದರೂ ತಮಾಷೆಗಾಗಿ ಒಂದು ಸಣ್ಣ ಸುಳ್ಳು ಹೇಳಿದರೂ ಅವರಿಂದ ಏನನ್ನೂ ಸ್ವೀಕರಿಸುತ್ತಿರಲಿಲ್ಲ. ಆದರೆ ಇಲ್ಲಿ ಶ್ರೀರಾಮಕೃಷ್ಣರು ಭಕ್ತವರೇಣ್ಯನಾದ ಸುರೇಂದ್ರನ ದಾನಗುಣವನ್ನು ಎತ್ತಿ ಹಿಡಿಯುತ್ತ, ಗೃಹಸ್ಥ ಜೀವನದಲ್ಲಿ ದಾನದ ಮಹತ್ವವನ್ನು ತೋರಿಸಿಕೊಡುತ್ತಿದ್ದಾರೆ.

ನಾವು ನಮ್ಮ ಕೈಲಾದಷ್ಟು ಸೇವೆಯನ್ನು ಸಲ್ಲಿಸೋಣ. ಶಕ್ತಿ ಮೀರಿ ಇತರರ ಒಳಿತಿಗಾಗಿ ಶ್ರಮಿಸೋಣ. ಭೌತಿಕ ಸ್ತರದಲ್ಲಿನ ಸೇವೆ ನಮ್ಮಿಂದ ಅಸಾಧ್ಯವಾದಾಗ ಎಲ್ಲರ ಶ್ರೇಯಸ್ಸಿಗಾಗಿ ಹೃತ್ಪೂರ್ವಕವಾಗಿ ಪ್ರಾರ್ಥನೆಯನ್ನು ಸಲ್ಲಿಸುವುದರ ಮೂಲಕವೂ ಸೇವಾಧರ್ಮವನ್ನು ಪಾಲಿಸಿದಂತಾಗುತ್ತದೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಪರಮಯೋಗಿಗೆ ಯಾವ ಗತಿ ಪ್ರಾಪ್ತವಾಗುವುದೋ, ಜನಪರ ಸೇವಾಕಾರ್ಯಗಳಿಂದ ಗೃಹಸ್ಥನಿಗೆ ಅಂತಹ ಅತ್ಯುನ್ನತವಾದ ಸ್ಥಿತಿ ಪ್ರಾಪ್ತವಾಗುತ್ತದೆ.''

''ಗೃಹಸ್ಥನು ತನ್ನ ದೇಶಕ್ಕಾಗಿ ಅಥವಾ ಧರ್ಮಕ್ಕಾಗಿ ಯುದ್ಧದಲ್ಲಿ ಮಡಿದರೆ, ಯೋಗಿಯು ಧ್ಯಾನದಿಂದ ಯಾವ ಪದವಿಯನ್ನು ಪಡೆಯುವನೊ ಅದನ್ನೇ ಅವನು ಹೊಂದುವನು.''

ಸರ್ವಸಂಗ ಪರಿತ್ಯಾಗಿಯಾದ ಸಂನ್ಯಾಸಿಗೆ ಧ್ಯಾನ ಜೀವನದಿಂದ ಯಾವ ಪರಮಪದವಿ ಪ್ರಾಪ್ತವಾಗುವುದೋ, ನಿಸ್ವಾರ್ಥವಾದ ಸೇವೆಯ ಮೂಲಕ ಗೃಹಸ್ಥನು ಅದೇ ಹಂತವನ್ನು ತಲುಪುತ್ತಾನೆ ಎಂದು ಸ್ವಾಮೀಜಿ ನಮಗೆ ಭರವಸೆ ಕೊಡುತ್ತಾರೆ. ದಿವ್ಯತ್ರಯರು ತೋರಿಸಿಕೊಟ್ಟ ಸೇವಾಧರ್ಮವು ನಮ್ಮ ಬಾಳಿನ ಉಸಿರಾಗಲಿ.

## ಸುಖದ ಬೇಟೆ

''ಪ್ರಪಂಚದಲ್ಲ ಭೋಗಿಸುವುದಕ್ಕೆ ಬೇಕಾದಷ್ಟು ಅವಕಾಶವಿರುವುದರಿಂದ ಅವುಗಳಲ್ಲಿ ಆಸಕ್ತರಾಗಿ ಬೇರೊಂದು ಆನಂದವಿದೆ ಎಂಬುದನ್ನು ಜನರು ಮರೆಯುವರು. 'ಮುಂದೆ ಏನಾಗುವುದೋ ಗೊತ್ತಿಲ್ಲ. ಸದ್ಯದಲ್ಲಿ ನಮ್ಮಲ್ಲಿರುವುದನ್ನು ಏತಕ್ಕೆ ಅನುಭವಿಸಕೂಡದು? ದೇವರು ಲಭಿಸುವನೋ ಇಲ್ಲವೋ, ಅಮೃತತ್ವ ಸಾಧ್ಯವೋ ಅಲ್ಲವೋ ಯಾರಿಗೂ ಗೊತ್ತಿಲ್ಲ. ಪ್ರಪಂಚವನ್ನು ಅನುಭವಿಸುವುದು ನಮ್ಮ ಕೈಯಲ್ಲಿದೆ. ಇದನ್ನು ಏತಕ್ಕೆ ನಾವು ತ್ಯಜಿಸಬೇಕು?' ಎಂದು ಅವರು ತರ್ಕಿಸುವರು. ಅದನ್ನು ಪಡೆಯಲು ಆಲೋಚಿಸದೆ ಧುಮುಕುವರು. ಆದರೆ ಪ್ರಪಂಚದಿಂದ ಬರುವ ದುಃಖದ ಅನುಭವದಿಂದ ಪ್ರಾಪಂಚಿಕ ಸುಖ ದುಃಖ ಸಂಕಟವನ್ನು ತರುವುದಲ್ಲದೆ ಶಾಂತಿ ಆನಂದವನ್ನು ಕೊಡಲಾರದು ಎಂದು ಗೊತ್ತಾದಾಗ 'ಅಯ್ಯೋ, ನಾವೇನು ಮಾಡಿದೆವು' ಎಂದು ವ್ಯಥೆಪಡುವರು. ಯಾವ ನಿಗ್ರಹವೂ ಇಲ್ಲದೆ ಭೋಗಜೀವನವನ್ನು ಅನುಸರಿಸಿ ಮನುಷ್ಯರು ಇಂದ್ರಿಯಗಳಿಗೆ ಗುಲಾಮರಾಗುವರು.''

— **ಸ್ವಾಮಿ ಬ್ರಹ್ಮಾನಂದ** *(ಬ್ರಹ್ಮಾನಂದ ವಚನಸುಧೆ, ಪು.೫೨)*